

ಈಗಾಗಲೇ ಹಲವು ಸಲ ಹೇಳಿರುವ ಎಳೆಯನ್ನೇ ಸರಿಯಾದ ಸ್ಟ್ರಕ್ಚರ್‌ನಲ್ಲಿ ಹೇಳಿದಾಗ ಹೇಗೆ ಪರಿಣಾಮಕಾರಿ ಆಗಬಹುದು ಎಂಬುದಕ್ಕೆ ಈ ಕಿರುಚಿತ್ರವನ್ನು ಉದಾಹರಣೆಯಾಗಿ ನೋಡಬಹುದು.

■ ಗೌರಿ

# ಹಳೆಯ ನಾರು; ತಾಜಾ ಹೂವು!

ಇತ್ತೀಚೆಗಷ್ಟೇ ಸತ್ಯ ಹೆಗಡೆ ಸ್ಟುಡಿಯೋಸ್‌ನಲ್ಲಿ ಬಿಡುಗಡೆಯಾದ ಕಿರುಚಿತ್ರ ‘ಲಾಸ್ಟ್ ಆರ್ಡರ್’ ಗಮನ ಸೆಳೆಯಲು ಹಲವು ಕಾರಣಗಳಿವೆ. ಅದರಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ಆ ಕಿರುಚಿತ್ರದ ಕಥನದ ಸ್ಟ್ರಕ್ಚರ್.

ತುಂಬ ವಿಭಿನ್ನವಾದದ್ದನ್ನು ಮಾಡಬೇಕು, ವಿಭಿನ್ನ ಗುಣದ ಕಾರಣದಿಂದಲೇ ಗುರ್ತಿಸಿಕೊಳ್ಳಬೇಕು ಎಂಬುದು ಹೊಸ ತಲೆಮಾರಿನ ಬಹುತೇಕರ ಹಪಹಪಿ. ಆದರೆ ವಿಭಿನ್ನವಾದ್ದೆಲ್ಲವೂ ವಿಚಿತ್ರವಾಗಿಯೇ ಇರಬೇಕಾಗಿಲ್ಲ. ಅದು ಅಸಹಜವಾಗಿಯೂ ಕಾಣಬೇಕಾಗಿಲ್ಲ. ತುಂಬ ಸಹಜವಾದ ಕಥೆಯ ಮೂಲಕ ಪ್ರೇಕ್ಷಕನ ಭಾವವೀಣೆಯನ್ನು ಮೀಟುವ ಕಥೆಗಳೆಲ್ಲವೂ ವಿಭಿನ್ನವಾದ ಛಾಪನ್ನೇ ಮನಸಲ್ಲಿ ಒತ್ತುತ್ತವೆ. ಹಾಗಾಗಿಯೇ ಎಷ್ಟೇ ವಿಭಿನ್ನವಾಗಿದ್ದನ್ನು ಮಾಡಿದರೂ ಮನಸ್ಸನ್ನು ಮುಟ್ಟದಿದ್ದರೆ ಅದು ಯಶಸ್ವಿಯಾಗುವುದಿಲ್ಲ.

ಪ್ರಶಾಂತ್ ಗೌಡ ನಿರ್ದೇಶನದ ‘ಲಾಸ್ಟ್ ಆರ್ಡರ್‘ ಹೀಗೆ ವಿಭಿನ್ನವಾದದ್ದನ್ನೇ ಹೇಳಬೇಕು ಎಂಬ ಹಟವನ್ನು ಬಿಟ್ಟು, ಮನಸ್ಸಿಗೆ ತಟ್ಟುವಂಥದ್ದನ್ನು ಸರಿಯಾದ ಸ್ಟ್ರಕ್ಚರ್ ಮೂಲಕ ಹೇಳಬೇಕು ಎಂಬ ಉದ್ದೇಶದಿಂದ ರೂಪುಗೊಂಡ ಸಿನಿಮಾ. ದುಡಿಯುವ ತಂದೆ ತಾಯಿಗಳ ಸಂಕಷ್ಟಗಳ ಅರಿವಿಲ್ಲದೆ, ಮೋಜಿನಲ್ಲಿ ತೊಡಗುವ ಮಕ್ಕಳ ಕಥೆ ಸಾಕಷ್ಟು ಸಲ ನೋಡಿದ್ದೀವಿ. ಕೊನೆಯಲ್ಲಿ ಅದು ಅವರಿಗೆ ಅರಿವಾದಾಗ ಉಂಟಾಗುವ ಭಾವಸ್ಫೋಟ ತೆರೆಯ ಮೇಲೆ ಕ್ಲೀಷೆ ಅನಿಸುವಷ್ಟು ಸಲ ಬಂದು ಹೋಗಿದೆ. ಪ್ರಶಾಂತ್ ಗೌಡ ಅವರು ಆಯ್ದುಕೊಂಡಿರುವುದೂ ಅದೇ ಎಳೆಯನ್ನು. ಅದನ್ನೇ ಸರಿಯಾದ ಕ್ರಮದಲ್ಲಿ ಹೇಳಿದರೆ ಪರಿಣಾಮಕಾರಿ ಕಥನವಾಗುತ್ತದೆ ಎಂಬ ನಂಬಿಕೆಯೇ ಈ ಕಿರುಚಿತ್ರವನ್ನು ಕಟ್ಟಿದೆ. ಇಲ್ಲಿ ಅಪ್ಪ, ಅಮ್ಮನ ಜಾಗದಲ್ಲಿ ಅಕ್ಕ ಇದ್ದಾಳೆ. ಅಷ್ಟೇ ಅಲ್ಲ, ಹಳೆಯ ಎಳೆಯನ್ನು ಹೊಸ ಕ್ಯಾನ್ವಾಸಿನಲ್ಲಿ ಇಟ್ಟಾಗ ಸಿಗುವ ತಾಜಾತನದ ಹೊಳಪೂ ಈ ಕಿರುಚಿತ್ರಕ್ಕೆ ದಕ್ಕಿದೆ. ಹಾಗಾಗಿಯೇ ಇದು ಬರೀ ಕಥೆಯ ಎಳೆಯಾಗಿಯಷ್ಟೇ ಅಲ್ಲದೆ, ಜೊಮ್ಯಾಟೊ ಫುಡ್ ಡೆಲಿವರಿ ಮಾಡುವ ಹುಡುಗಿಯೊಬ್ಬಳ ಬದುಕಿನ ಸವಾಲುಗಳನ್ನು, ಸಮಾಜ ಅವಳನ್ನು ನೋಡುವ ರೀತಿಯನ್ನು, ಆಗುವ ಅವಮಾನಗಳನ್ನು, ನೋವು – ದಣಿವುಗಳನ್ನು ನುಂಗಿಕೊಂಡು ನಗುನಗುತ್ತಲೇ ಇರಬೇಕಾದ ಅನಿವಾರ್ಯಗಳನ್ನು, ತನ್ನ ಇಡೀ ವ್ಯಕ್ತಿತ್ವವನ್ನೇ ಗ್ರಾಹಕ ನೀಡುವ ಸ್ಟಾರ್‌ಗಳಿಗೆ ಅಡವಿಟ್ಟುಕೊಳ್ಳಬೇಕಾದ ವಿಪರ್ಯಾಸವನ್ನು ಇನ್ನೂ ಹಲವು ಸಂಗತಿಗಳನ್ನು ಹೇಳುತ್ತದೆ.

ಕಿರುಚಿತ್ರವೆಂದರೆ ಆಕರ್ಷಕವಾದ ಮಾತುಕತೆ ಎಂಬ ತಪ್ಪು ಕಲ್ಪನೆಗೂ ಈ ಕಿರುಚಿತ್ರ ಉತ್ತರದಂತಿದೆ. ಇಡೀ ಚಿತ್ರದಲ್ಲಿ ಮಾತು ತುಂಬ ಕಡಿಮೆ ಇದೆ. ದೃಶ್ಯಕ್ಕೆ ಪೂರಕವಾಗಿ, ಅನಿವಾರ್ಯವಾಗಿದ್ದಾಗ ಮಾತ್ರವೇ ಮಾತು ಬಳಕೆಯಾಗಿದೆ. ಹಾಗಾಗಿಯೇ ಮಾತಿನಲ್ಲಿ ಹಾರಿ ಹೋಗಬಹುದಾಗಿದ್ದ ಅನುಭವವೆಲ್ಲವೂ ದೃಶ್ಯವಾಗಿ ಮನಸೊಳಗೆ ಇಳಿಯುತ್ತದೆ. ಈ ಕಾರಣಕ್ಕಾಗಿಯೇ ಕೊನೆಯಲ್ಲಿ ನಾಯಕಿ ಆಡುವ ಒಂದು ಮಾತು ಮನಸೊಳಗೆ ಸೂಜಿಯ ಹಾಗೆ ಚುಚ್ಚಿ, ಮನಸ್ಸುಕಚ್ಚಿ ನಿಲ್ಲುತ್ತದೆ.

ನಾಯಕಿಯ ಬದುಕಿನ, ಮನಸ್ಥಿತಿಯ ಅಸ್ಥಿರತೆಯನ್ನು ಬಿಂಬಿಸುವ ಹಾಗೆಯೇ ಬಂದಿರುವ ಅಸ್ಥಿರವಾದ ಶಾಟ್‌ಗಳು ಛಾಯಾಗ್ರಹಣವನ್ನು ಕಥೆಯ ಭಾಗವಾಗಿಯೇ ಇರುವಂತೆ ಮಾಡಿದೆ. ಕೊನೆಯ ಪಂಚ್‌ಗಾಗಿಯೇ ಗುರಿನೆಟ್ಟಂತಿರದೆ, ಒಂದೊಂದು ಫ್ರೇಮ್ ಕೂಡ ಸಿನಿಮಾದ ಅವಿಭಾಜ್ಯ ಭಾಗವೇ ಆಗಿರುವಂತೆ ಕಟ್ಟಿದ ರೀತಿ, ಇಡೀ ಕಿರುಚಿತ್ರವನ್ನು ಒಂದು ಅನುಭವದ ಗುಚ್ಛವನ್ನಾಗಿ ಕಾಣುವಂತೆ ಮಾಡಿದೆ. ಇದಕ್ಕೆ ಪೂರಕವಾಗಿ ಮುಖ್ಯಪಾತ್ರಧಾರಿ ರಮ್ಯ ಕೃಷ್ಣ ಅವರ ಅಭಿನಯವೂ ಇದೆ.



ಹೆಸರು: ಲಾಸ್ಟ್ ಆರ್ಡರ್ (ಕನ್ನಡ)
ನಿರ್ದೇಶನ: ಪ್ರಶಾಂತ್ ಗೌಡ
ನಿರ್ಮಾಣ: ಶಿಲ್ಪಾ ಹೆಗಡೆ
ಛಾಯಾಗ್ರಹಣ: ಅಚ್ಯುತ್ ಬಿ.ಎಸ್
ಶಬ್ದ ವಿನ್ಯಾಸ, ಸಂಗೀತ: ಕರಣ್
ಸಂಕಲನ: ತಿಲಕ್ ಕುಮಾರ್
ತಾರಾಗಣ: ರಮ್ಯ ಕೃಷ್ಣ, ರಕ್ಷಿತ್ ಕರಿಯಣ್ಣ, ವೀಕ್ಷಿತ್ ಗೌಡ

ಕಿರುಚಿತ್ರ ವೀಕ್ಷಣೆಗೆ https://bit.ly/3ydFGDg ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.